ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017–18 ದಿನಾಂಕ: 19–11–2018

# ಪತ್ರಿಕಾ ಆಮಂತ್ರಣ

1. ಪ್ಯಾರಾ ಏಷ್ಯನ್ ಗೇಮ್ಸ್ ಪದಕ ವಿಜೇತರಿಗೆ ಸನ್ಮಾನ:

ಡಾ: ಜಿ. ಪರಮೇಶ್ವರ್,
ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ದಿನಾಂಕ: 20–11–2018, ಮಂಗಳವಾರ, ಬೆಳಿಗ್ಗೆ 9–30 ಗಂಟೆಗೆ
ಸ್ಥಳ: ಬಿ.ಡಿ.ಎ. ಅಧ್ಯಕ್ಷರ ವಸತಿ ಗೃಹ, 9 ನೇ ಮುಖ್ಯ ರಸ್ತೆ, ಸದಾಶಿವನಗರ,
ಬೆಂಗಳೂರು–560 080

2. ಮಹಾತ್ಮಾಗಾಂಧಿ ಮಾಧ್ಯಮ ಕೇಂದ್ರ ಉದ್ಘಾಟನಾ ಸಮಾರಂಭ:

ಉದ್ಘಾಟನೆ:
ಹೆಚ್.ಡಿ. ಕುಮಾರಸ್ವಾಮಿ,
ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ದಿನಾಂಕ: 20–11–2018 ಮಂಗಳವಾರ ಬೆಳಿಗ್ಗೆ 10–00 ಗಂಟೆಗೆ
ಸ್ಥಳ: ಮಹಾತ್ಮಾಗಾಂಧಿ ಮಾಧ್ಯಮ ಕೇಂದ್ರ, ಮೂರನೇ ಮಹಡಿ, ವಾರ್ತಾ ಸೌಧ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಸಂಖ್ಯೆ 17,
ಭಗವಾನ್ ಮಹಾವೀರ ರಸ್ತೆ, ಬೆಂಗಳೂರು –560 001

3. ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ ಸಮಾರೋಪ ಹಾಗೂ ಸಿಬ್ಬಂದಿ ಸೇವಾ ಪ್ರಶಸ್ತಿ ಪ್ರದಾನ ಸಮಾರಂಭ.

<u>**ಉದ್ಘಾಟನೆ:**</u>
ಡಿ.ವಿ. ಸದಾನಂದಗೌಡ,
ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವರು, ಭಾರತ ಸರ್ಕಾರ.

<u>**ಪುಸ್ತಕ ಪ್ರದರ್ಶನ ಉದ್ಘಾಟನೆ:**</u>
ಶ್ರೀಮತಿ ನಿರ್ಮಲಾ ಸೀತಾರಾಮನ್, ಕೇಂದ್ರ ರಕ್ಷಣಾ ಸಚಿವರು, ಭಾರತ ಸರ್ಕಾರ.

<u>**ಸಿಬ್ಬಂದಿ ಸೇವಾ ಪ್ರಶಸ್ತಿ ಪ್ರದಾನ:**</u>
ಡಾ. ಜಿ. ಪರಮೇಶ್ವರ್, ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.

<u>**ಅಧ್ಯಕ್ಷತೆ:**</u>
ಶ್ರೀ ಎಂ. ಕೃಷ್ಣಪ್ಪ, ಶಾಸಕರು, ವಿಜಯನಗರ ವಿಧಾನಸಭಾ ಕ್ಷೇತ್ರ
ದಿನಾಂಕ: 20–11–2018 ಮಂಗಳವಾರ ಸಮಯ: ಬೆಳಿಗ್ಗೆ 11.00 ಗಂಟೆಗೆ
ಸ್ಥಳ: ಗ್ರಂಥಾಂಗಣ, ನಗರ ಕೇಂದ್ರ ಗ್ರಂಥಾಲಯ, ಪಶ್ಚಿಮ ವಲಯ, ಹಂಪಿನಗರ, ಬೆಂಗಳೂರು.

4. ಕನ್ನಡ ಪುಸ್ತಕ ಪ್ರಾಧಿಕಾರ ವತಿಯಿಂದ ನಿಮ್ಮ ಮನೆ ನಮ್ಮ ಪುಸ್ತಕ.

<u>**ಅತಿಥೇಯರು:**</u>
ಡಾ. ಲೀಲಾದೇವಿ ಆರ್. ಪ್ರಸಾದ್,
ಮಾಜಿ ಸಚಿವರು

<u>**ನಮ್ಮೊಂದಿಗೆ:**</u>
ಶ್ರೀ ಎನ್. ಷಡಕ್ಷರಿ
ಪ್ರೊ. ಪದ್ಮಾ ಶೇಖರ್,
ಶ್ರೀಮತಿ ಜಿ.ವಿ. ರೇಣುಕಾ,
ಶ್ರೀಮತಿ ನಿರ್ಮಲಾ ಸಿ. ಎಲಿಗಾರ್,

<u>**ಪುಸ್ತಕದೊಂದಿಗೆ:**</u>

ಡಾ. ವಸುಂಧರಾ ಭೂಪತಿ, ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ.

ದಿನಾಂಕ: 20-1-2018, ಮಂಗಳವಾರ ಸಮಯ: ಸಂಜೆ 4-30 ಗಂಟೆಗೆ.
ಸ್ಥಳ: ಡಾ. ಲೀಲಾದೇವಿ ಆರ್. ಪ್ರಸಾದ್ ಅವರ ಮನೆಯಂಗಳ, ನಂ 64, 1ನೇ ಮುಖ್ಯರಸ್ತೆ, ಲೋಯರ್ ಪ್ಯಾಲೇಸ್ ಅರ್ಚರ್ಡ್, ಬೆಂಗಳೂರು – 560 003

**ಸಂಖ್ಯೆ 1319/1419**

# ಪತ್ರಿಕಾ ಪ್ರಕಟಣೆ

## ಕನ್ನಡದ ಬೆಳವಣಿಗೆಗೆ ಕನ್ನಡಿಗರೇ ಶತೃಗಳು : ಪ್ರೊ ಎಸ್ ಜಿ ಸಿದ್ದರಾಮಯ್ಯ

ಬೆಂಗಳೂರು, ನವೆಂಬರ್ 19 (ಕರ್ನಾಟಕ ವಾರ್ತೆ) :

ಕನ್ನಡದ ಬೆಳವಣಿಗೆಗೆ ಕನ್ನಡಿಗರೇ ಶತೃಗಳು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರೊ ಎಸ್ ಜಿ ಸಿದ್ದರಾಮಯ್ಯ ಅವರು ಇಲ್ಲಿ ಇಂದು ಬಣ್ಣಿಸಿದರು.
ನಗರದ ವಾರ್ತಾ ಸೌಧದ ಸುಲೋಚನಾ ಸಭಾಂಗಣದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವಾರ್ತಾ ಬಳಗ ಆಯೋಜಿಸಿದ್ದ ಅರವತ್ತ ಮೂರನೇ ಕರ್ನಾಟಕ ರಾಜ್ಯೋತ್ಸವ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಕನ್ನಡಿಗರಲ್ಲಿರುವ ಗಾಢವಾದ ಕೀಳರಿಮೆಯ ಭಾವ, ಹಿಂಜರಿತ ಹಾಗೂ ಇಚ್ಛಾಶಕ್ತಿ ಕೊರತೆ ಕನ್ನಡದ ಬೆಳವಣಿಗೆಗೆ ಮಾರಕವಾಗಿದೆ. ತ್ರಿ-ಭಾಷಾ ಸೂತ್ರವನ್ನು ಒಪ್ಪಿಕೊಳ್ಳದೆ ದ್ವಿ-ಭಾಷಾ ನೀತಿಯನ್ನು ಸ್ವೀಕರಿಸಿದ ರಾಜ್ಯಗಳಲ್ಲಿ ಭಾಷೆ ಬೆಳೆದಿದೆ ಎಂದು ಉದಾಹರಿಸಿದರು.

ಸ್ವಾತಂತ್ರ್ಯಾ ನಂತರದ ಭಾರತದಲ್ಲಿ ಕುವೆಂಪು ಅವರು ಕನ್ನಡವನ್ನು ತಮ್ಮ ಬದುಕಿನ ಉಸಿರನ್ನಾಗಿಸಿಕೊಂಡಿದ್ದರು. ತಮ್ಮ ಉತ್ಕೃಷ್ಠ ಹಾಗೂ ಸೃಜನಶೀಲ ಕೃತಿಗಳಾದ ಕಾನೂರು ಸುಬ್ಬಮ್ಮ ಹೆಗ್ಗಡತಿ ಹಾಗೂ ಮಲೆಗಳಲ್ಲಿ ಮಧುಮಗಳು ಮೂಲಕ ಕನ್ನಡ ಭಾಷೆಯಲ್ಲಿ ಸ್ತ್ರೀವಾದ ಮತ್ತು ಸ್ತ್ರೀ ಸಂವೇದನೆಯ ಹೊಸ ಸ್ತ್ರೀ ಜಗತ್ತನೇ ಪರಿಚಯಿಸಿದ್ದರು ಎಂದು ಅವರು ಸ್ಮರಿಸಿದರು.

ಮೈಸೂರು ವಿಶ್ವವಿದ್ಯಾಲಯದ ಕುಲಪತಿಯಾಗಿದ್ದ ಸಂದರ್ಭದಲ್ಲಿ ಕನ್ನಡದ ಬೋಧನೆ, ಸಂಶೋಧನೆಯ ಜೊತೆಗೆ ಪ್ರಸಾರಂಗ ತೆರೆದು ಕನ್ನಡ ಪುಸ್ತಕಗಳನ್ನು ಮಾರಾಟ ಮಾಡುವ ವ್ಯವಸ್ಥೆಗೂ ಚಾಲನೆ ನೀಡಿ ಕೇವಲ ಶ್ರೇಷ್ಠ ಕವಿ ಮತ್ತು ಸಾಹಿತಿ ಮಾತ್ರವಲ್ಲ, ಅತ್ಯುತ್ತಮ ಆಡಳಿತಗಾರನಾಗಿಯೂ ಜನ ಮಾನಸದಲ್ಲಿ ನೆಲೆಸಿದ್ದರು. ವೈದ್ಯಕೀಯ ಹಾಗೂ ತಂತ್ರಜ್ಞಾನ ಕ್ಷೇತ್ರದಲ್ಲಿ ಕನ್ನಡ ಬಳಕೆಯಾದರೆ ಮಾತ್ರ ಕನ್ನಡ ಭಾಷಾ ಭಂಡಾರ ಮತ್ತಷ್ಟು ವಿಸ್ತಾರಗೊಳ್ಳಲು ಸಾಧ್ಯ ಎಂದು ಪ್ರೊ ಸಿದ್ದರಾಮಯ್ಯ ಅವರು ಅಭಿಪ್ರಾಯಪಟ್ಟರು.

ಇದೇ ಸಂದರ್ಭದಲ್ಲಿ ತಮ್ಮ ಆಶಯ ಭಾಷಣದ ಮೂಲಕ ಸವಿಗನ್ನಡದ ಮಾತನಾಡಿದ ರಾಜ್ಯ ಸರ್ಕಾರದ ನಿವೃತ್ತ ಅಪರ ಮುಖ್ಯ ಕಾರ್ಯದರ್ಶಿ ಚಿರಂಜೀವ್ ಸಿಂಗ್ ಅವರು ಕುವೆಂಪು ಅವರ ಬರಹಗಳಲ್ಲಿ ಜಾತಿ ನಿರ್ಮೂಲನೆ ಹಾಗೂ ತತ್ವ–ಸಿದ್ಧಾಂತಗಳು ಮಾತ್ರವಲ್ಲ, ಅವರಲ್ಲಿದ್ದ ಹಾಸ್ಯ ಪ್ರಜ್ಞೆಯನ್ನೂ ನಾವು ಗುರುತಿಸಬೇಕಿದೆ ಎಂದರು.

ಒಂದೆಡೆ ಕನ್ನಡ ದಿನಪತ್ರಿಕೆಗಳ ಪ್ರಸಾರ ಸಂಖ್ಯೆ ಹೆಚ್ಚುತ್ತಿದೆ. ಮತ್ತೊಂದೆಡೆ ಕನ್ನಡದ ಸುದ್ದಿ ವಾಹಿನಿಗಳ ಸಂಖ್ಯೆಯೂ ಏರಿಕೆಯಾಗುತ್ತಿದೆ. ರಾಜ್ಯದಲ್ಲಿ ಒಂದೆಡೆ ಸಾಕ್ಷರತೆ ಹೆಚ್ಚಾಗಿದೆ. ಆದರೆ, ಕನ್ನಡದಲ್ಲಿ ಬರಹಗಾರರ ಸಂಖ್ಯೆ ಕ್ಷೀಣಿಸುತ್ತಿದೆ. ಒಂದೆಡೆ ಕನ್ನಡ ಪುಸ್ತಕಗಳ ಮಾರಾಟ ಇಳಿಮುಖವಾಗುತ್ತಿದೆ. ಇವೆಲ್ಲಾ ವೈರುಧ್ಯಗಳ ನಡುವೆಯೂ ಕನ್ನಡ ಭಾಷೆ ಜೀವಂತವಾಗಿದೆ. ಎಂದು ಅವರು ಪ್ರತಿಪಾದಿಸಿದರು.

ಕನ್ನಡ ಭಾಷೆ ನಶಿಸಿಹೋಗುತ್ತಿದೆ ಎಂಬ ವಾದವನ್ನು ತಾವೆಂದೂ ಒಪ್ಪುವುದಿಲ್ಲ. ಕಾಲ ಕಳೆದಂತೆ ಎಲ್ಲಾ ಭಾಷೆಗಳಲ್ಲಿಯೂ ಆ ಭಾಷಾ–ಸ್ವರೂಪ ಬದಲಾಗುತ್ತದೆ. ಇಂಗ್ಲೀಷ್ ಭಾಷೆಯ ಪ್ರಭಾವದಿಂದ ಫ್ರೆಂಚ್ ಮತ್ತು ಜರ್ಮನ್ ಭಾಷೆಗೆ ಆಪತ್ತು ಇತ್ತು ಎಂದು ಭಾವಿಸಿದ ಕಾಲವಿತ್ತು. ಆದರೆ, ಇದೀಗ ಬ್ರಿಟನ್, ಫ್ರಾನ್ಸ್ ಮತ್ತು ಜರ್ಮನಿ ಈ ಮೂರೂ ಐರೋಪ್ಯ ದೇಶಗಳಲ್ಲಿ ಮೂರೂ ಭಾಷೆಗಳು ಪರಚಲಿತವಾಗಿದೆ ಎಂಬುದನ್ನು ನಾವು ಗಮನಿಸಬಹುದು ಎಂದು ಹೇಳಿದರು.

ತ್ರಿ–ಭಾಷಾ ಸೂತ್ರದಿಂದ ಅಪಾಯವಿಲ್ಲ ! ತ್ರಿ–ಭಾಷಾ ಸೂತ್ರದಿಂದ ಕನ್ನಡ ಭಾಷೆಗೆ ಯಾವುದೇ ಅಪಾಯ ಬಂದೊದಗಿಲ್ಲ. ಆದರೆ, ಮಾತೃಭಾಷೆಯನ್ನು ಮನೆಯಲ್ಲಿಯೇ ಬಳಸದೆಯೇ ಕನ್ನಡ ಭಾಷೆ ಅಪಾಯದ ಅಂಚಿನೆಡೆ ವಾಲುತ್ತಿದೆ. ಮನೆ ಮನೆಗಳಲ್ಲಿ ಕನ್ನಡ ಭಾಷೆಯಲ್ಲಿಯೇ ವ್ಯವಹರಿಸುವ ಪರಿಪಾಠವನ್ನು ರೂಢಿಸಿಕೊಂಡಲ್ಲಿ ನಮ್ಮ ಕನ್ನಡ ಭಾಷೆಯನ್ನು ಉಳಿಸಿ–ಬೆಳೆಸಬಹುದಾಗಿದೆ ಎಂದರು.

ಇದೇ ತಿಂಗಳು ವಯೋನಿವೃತ್ತಿಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕ ಎನ್.ಆರ್. ವಿಶುಕುಮಾರ್ ಅವರನ್ನು ವಾರ್ತಾ ಬಳಗದಿಂದ ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಲಾಯಿತು.

ಹೆಚ್.ಆರ್.ಸುಜಾತ ಅವರ ಪರಿಕಲ್ಪನೆ ಮತ್ತು ನಿರ್ವಹಣೆಯಲ್ಲಿ ಎಂ.ಗಣೇಶ್ ಉಡುಪಿ ಅವರ ತಂಡ ರಾಷ್ಟ್ರಕವಿ ಕುವೆಂಪು ಅವರ ಶ್ರೀ ರಾಮಾಯಣ ದರ್ಶನಂ ವಾಚನ ಮತ್ತು ಆಂಗಿಕ ಅಭಿನಯ ಸಮಾರಂಭದ ವಿಶೇಷ ಆಕರ್ಷಣೆಯಾಗಿತ್ತು.

## ರಂಗಾಯಣದ ಕಲಾವಿದರಿಂದ
## ರಾಷ್ಟ್ರ ಕವಿ ಕುವೆಂಪು ಶ್ರೀ ರಾಮಾಯಣ ದರ್ಶನಂ ರಂಗಪ್ರಸ್ತುತಿ
## ನವೆಂಬರ್ 23 ಮತ್ತು 24 ರಂದು ರವೀಂದ್ರ ಕಲಾಕ್ಷೇತ್ರದಲ್ಲಿ

ಬೆಂಗಳೂರು, ನವೆಂಬರ್ 19 (ಕರ್ನಾಟಕ ವಾರ್ತೆ) :

ಕನ್ನಡಕ್ಕೆ ಮೊದಲ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ ರಾಷ್ಟ್ರಕವಿ ಕುವೆಂಪು ಅವರ ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯಕ್ಕೆ 50 ವರ್ಷಗಳು ತುಂಬಿರುವ ಹಿನ್ನೆಲೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಶ್ರಯದಲ್ಲಿ ಮೈಸೂರಿನ ರಂಗಾಯಣ ಕಲಾವಿದರಿಂದ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ನವೆಂಬರ್ 23 ಮತ್ತು 24 ರಂದು ಶ್ರೀ ರಾಮಾಯಣ ದರ್ಶನಂ ನಾಟಕವನ್ನು ಹಮ್ಮಿಕೊಳ್ಳಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಿರ್ದೇಶಕ ಎನ್. ಆರ್. ವಿಶುಕುಮಾರ್ ಅವರು ತಿಳಿಸಿದರು.

ಅವರು ಇಂದು ಕನ್ನಡ ಭವನದಲ್ಲಿ ಹಮ್ಮಿಕೊಳ್ಳಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಕುವೆಂಪು ಅವರನ್ನು ಸ್ಮರಿಸಿಕೊಳ್ಳಲು ಹಾಗೂ ಅವರ ಮಹಾಕಾವ್ಯ ಶ್ರೀ ರಾಮಾಯಣ ದರ್ಶನಂ ಕೃತಿಯನ್ನು ರಂಗಭೂಮಿಗೆ ಅಳವಡಿಸಿ ರಾಜ್ಯದ ಲಕ್ಷಾಂತರ ಜನರಿಗೆ ತೋರಿಸುವ ಉದ್ದೇಶದಿಂದ ಈ ಬೃಹತ್ ಯೋಜನೆಗೆ ತಯಾರಿ ನಡೆಸಲಾಯಿತು ಎಂದು ತಿಳಿಸಿದರು.

ಈಗಾಗಲೇ ಈ ನಾಟಕದ ಪ್ರದರ್ಶನ ಮೈಸೂರಿನಲ್ಲಿ ಜರುಗಿದ್ದು ಯಶಸ್ವಿ ಪ್ರಾಯೋಗಿಕ ಪ್ರದರ್ಶನ ಕಂಡಿದೆ. ಬೆಂಗಳೂರಿನ ಸಾಹಿತ್ಯಸಾಕ್ತರಿಗೆ ಈ ನಾಟಕವನ್ನು ತಲುಪಿಸುವ ಉದ್ದೇಶದಿಂದ ನವೆಂಬರ್ 23 ಮತ್ತು 24 ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡಿರುವ ಪ್ರದರ್ಶನ ಸಂಜೆ 6.00 ಗಂಟೆಗೆ

ಪ್ರಾರಂಭವಾಗುತ್ತದೆ. ಮುಂಗಡ ಟಿಕೇಟ್‌ಗಳನ್ನು ನೇರವಾಗಿ ರವೀಂದ್ರ ಕಲಾಕ್ಷೇತ್ರದಲ್ಲಿರುವ ಟಿಕೇಟ್ ಕೌಂಟರ್‌ನಲ್ಲಿ ಅಥವಾ www.rangayana.org ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮೂಲಕ ಖರೀದಿಸಬಹುದಾಗಿದೆ. ಟಿಕೇಟ್ ಬೆಲೆ 50/- ರೂ. ಗಳು.

ಈ ಮಹಾಕಾವ್ಯವನ್ನು ರಂಗಾಯಣದ ಕಲಾವಿದರಾದ ಜಗದೀಶ ಮನೆವಾರ್ತೆ ಹಾಗೂ ಕೃಷ್ಣಕುಮಾರ್ ನಾರ್ಣಕಜೆ ಅವರು ರಂಗರೂಪಕ್ಕೆ ತಂದಿದ್ದು ನಾಡಿನ ಖ್ಯಾತ ರಂಗಭೂಮಿ ನಿರ್ದೇಶಕ ಕೆ.ಜಿ. ಮಹಾಬಲೇಶ್ವರ ಅವರು ನಿರ್ದೇಶನ ಮಾಡಿದ್ದಾರೆ.

ಒಟ್ಟು 92 ಪಾತ್ರಗಳಿರುವ ಈ ಮಹಾಕಾವ್ಯದ ರಂಗರೂಪದಲ್ಲಿ 52 ಕಲಾವಿದರು ಅಭಿನಯಿಸಿದ್ದಾರೆ. 4.30 ಗಂಟೆ ಅವಧಿಯ ನಾಟಕದಲ್ಲಿ ಒಂದು ಮಧ್ಯಾಂತರ ಇದ್ದು ಮಹಾಕಾವ್ಯದಲ್ಲಿ ಉಲ್ಲೇಖವಾಗಿರುವ ರಾಮನ ಅಯೋಧ್ಯೆ ರಾಜ್ಯದ ಸನ್ನಿವೇಶಗಳ ಸಂದರ್ಭದಲ್ಲಿ ಮಣಿಪುರ ತರಹದ ವಸ್ತ್ರ ಅಲಂಕಾರ, ಕಿಷ್ಕಿಂಧ ಸನ್ನಿವೇಶಗಳಲ್ಲಿ ಬುಡಕಟ್ಟು ಸಂಸ್ಕೃತಿ ಹಾಗೂ ಲಂಕೆಗೆ ಸಂಬಂದಿಸಿದ ಸನ್ನಿವೇಶಗಳಲ್ಲಿ ಶ್ರೀಲಂಕಾದ ರೀತಿಯ ವಸ್ತ್ರ ಅಲಂಕಾರಗಳನ್ನು ಮಾಡಲಾಗಿದ್ದು ರವಿ ಮೂರುರು ಅವರು ಸಂಗೀತ ನಿರ್ದೇಶನ ಮಾಡಿದ್ದಾರೆ.

ಈ ಮಹಾಕಾವ್ಯದ ರಂಗರೂಪವನ್ನು ರಾಜ್ಯದ ಪ್ರತಿ ರಂಗಾಸಕ್ತರಿಗೂ ತಲುಪಿಸುವ ನಿಟ್ಟಿನಲ್ಲಿ ಸಮಯ ಹಾಗೂ ವೇದಿಕೆಯ ರಂಗರೂಪಕ್ಕೆ ಹೊಂದಿಕೊಳ್ಳುವಂತೆ ನಿರ್ದೇಶಿಸಲಾಗಿದ್ದು, ಯಾವುದೇ ಸ್ಥಳದಲ್ಲೂ ಸಹ ಪ್ರದರ್ಶನವನ್ನು ನೀಡಬಹುದಾಗಿದೆ.

ಡಿಸೆಂಬರ್ 5 ರಿಂದ ಒಟ್ಟು 15 ಪ್ರದರ್ಶನಗಳು ರಾಜ್ಯಾದ್ಯಂತ ನಡೆಯಲಿದ್ದು ರಂಗಾಯಣದ ಬಹುರೂಪಿ ಉತ್ಸವದ ನಂತರ ಮತ್ತೆ ಎರಡನೇ ಪ್ರವಾಸ ಪ್ರಾರಂಭಗೊಂಡು ಅಲ್ಲಿ ಸಹ 15 ಪ್ರದರ್ಶನಗಳನ್ನು ನೀಡಲಾಗುವುದು. ಪ್ರದರ್ಶನಗಳ ವೇಳೆ ಕಲಾವಿದರಿಗೆ ತೊಂದರೆಯಾಗದಂತೆ ತಲಾ ಎರಡೆರಡು ಕಲಾವಿದರನ್ನು ಒಂದೊಂದು ಪಾತ್ರಗಳಿಗೆ ಆಯ್ಕೆ ಮಾಡಿ ನಿರ್ದೇಶಿಸಲಾಗಿರುವ ಈ ನಾಟಕ ರಂಗಭೂಮಿಯಲ್ಲೊಂದು ಮೈಲುಗಲ್ಲಾಗಲಿದೆ ಎಂದು ಹೇಳಿದರು.

ಈ ನಾಟಕದ ನಿರ್ದೇಶಕರಾದ ಕೆ. ಜಿ. ಮಹಾಬಲೇಶ್ವರ ಅವರು ಮಾತನಾಡಿ ಕುವೆಂಪು ಅವರ ಮಹಾಕೃತಿಯನ್ನು ರಂಗಭೂಮಿಗೆ ಅಳವಡಿಸುವ ಕಾರ್ಯಕ್ಕಿಂತ ಹೆಚ್ಚಾಗಿ ಪ್ರಸ್ತುತ ಸಮಾಜಕ್ಕೆ ಅದನ್ನು ಸಮಯ ಮಿತಿಯೊಳಗೆ ತರುವ ಕೆಲಸ ಅತ್ಯಂತ ಕಷ್ಟಕರವಾಗಿತ್ತು. ಸಾವಿರಾರು ಸಾಹಿತಿಗಳಿಂದ ಪುನರ್ ರಚಿಸಲ್ಪಟ್ಟಿರುವ ರಾಮಾಯಣ ಕುವೆಂಪು ಅವರ ಕನ್ನಡದಲ್ಲಿರುವ ಸಾಹಿತ್ಯವನ್ನು ಜನರಿಗೆ ತಲುಪಿಸುವ ಸದಾವಕಾಶ ತಮ್ಮದಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

ರಂಗಾಯಣದ ಜಂಟಿ ನಿರ್ದೇಶಕರಾದ ಮಲ್ಲಿಕಾರ್ಜುನ ಸ್ವಾಮಿ ಅವರು ಮಾತನಾಡಿ ಕುವೆಂಪು ಅವರ ರಾಮಾಯಣ ದರ್ಶನಂ ಕೃತಿಗೆ ಜ್ಞಾನಪೀಠ ದೊರಕಿ 50 ವರ್ಷಗಳಾಗಿರುವ ಈ ಸಂದರ್ಭದಲ್ಲಿ ರಂಗಬೀಷ್ಮ ಬಿ.ವಿ. ಕಾರಂತ ಆರಂಭಿಸಿದ ರಂಗಾಯಣ ಸಂಸ್ಥೆಗೆ ಸಹ ಈಗ 30 ವರ್ಷಗಳು. ಕುವೆಂಪು ಅವರ ಕಿಂದರಿ ಜೋಗಿ ನಾಟಕ ರಂಗಾಯಣದ ಮೊದಲ ರಂಗ ಪ್ರದರ್ಶನ ಆಗಿತ್ತು ಎಂದು ನೆನಪಿಸಿಕೊಂಡರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕರಾದ ಎನ್. ಆರ್. ವಿಶುಕುಮಾರ್ ಅವರ ಪರಿಕಲ್ಪನೆಯಲ್ಲಿ ಮೂಡಿ ಬಂದಿರುವ ರಂಗರೂಪ ನಾಡಿನ ಅನೇಕ ರಂಗಾಸಕ್ತರು ಹಾಗೂ ಸಾಹಿತ್ಯಸಾಕ್ತರಿಗೆ ರಸದೌತಣವಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ರಂಗಾಯಣ ಕಲಾವಿದರಾದ ಜಗದೀಶ್ ಮನೆವಾರ್ತೆ ಹಾಗೂ ಕೃಷ್ಣಕುಮಾರ್ ನಾರ್ಣಕಜೆ ಅವರು ಉಪಸ್ಥಿತರಿದ್ದರು.

**ಸಂಖ್ಯೆ 1320/1420**

## Kuvempu's "Sri Ramayana Darshanam" play

Bengaluru, Nov. 19 (Karnataka Information)

To mark 50 years of first Jnanapith recipient work of Kannada Sri Ramayana Darshanam by renowned writer Kuppali Venkatappa Puttappa-Kuvempu, state-run theatre repertory Nataka-Karnataka Rangayana has produced four and half hour long play. The play which has been staged for four shows at Bhoomigeeta auditorium of Rangayana from November 15 and response was overwhelming.

To reach out the ambitious play to Bengalureans, Rangayana will be staging the play for two-days at Ravindra Kalakshetra on November 23 and 24. The play will be inaugurated by Chief Minister H D Kumaraswamy and online booking will from Tuesday. "While 50% of tickets will be reserved for online booking and rest will be sold across the counter", said N.R Vishu Kumar, Director Department of Kannada and Culture. Rangayana.

After Bahuroopi theatre festival of Rangayana, the repertory will tour across the state and stage the play. Sri Ramayana Darshanam is the major production of the kind, after nine-hour Malegalalli Madumagalu directed by C Basavalingaiah. Rangayana, which staged Kindarijogi of Kuvemu-its first production is staging Sri Ramayana Darshanam to mark its 30th year of existence.

According to K G Mahabaleshwar, who directed the play; the total time duration of the play is five hours including interval of 15-minutes and over 90 plus artistes essays various characters of epic work of Kuvempu. "To abridge 900-page work with 20,000 lines to 110 pages with 2000 lines was really a big task. It took some three months to read, learn and internalise the verse of the work. We asked K G Mahabaleshwar, an exponent in adapting classics to theatre and renowned scholar in linguistics to direct the play", said Mr Vishukumar. Refusing to term the work as Halegannada style, Mr Mahabaleshwar classifies that as; "Kuvempu Kannada".

On the importance of the play, Mr Mahabaleshwar said; the play is not only about the known things of Ramayana. It depicts conflict of three cultures of Ramayana time; civilised Aryan, native culture of forest and glorified rich culture of Lanka. "Audience can experience Rama without a bow (Billu) Hanuma without a tail (Bala). They can have a slice of civilised, tribal and Srilankan culture through authentic costume and music (Ravi

Murur)and theatre design by artist H K Dwarakanath, said Jagadish Manevarte organiser of Rangayana.

**ಸಂಖ್ಯೆ 1321/1421**

# "DAK ADALAT"

Bengaluru, Nov. 19 (Karnataka Information)

"Dak Adalat" for redressal of public grievances relating to Postal Servces scheduled to be held on 5th December 2018 in the Conference Hall, O/o the Chief Postmaster General, Karnataka Postal Circle, No. 1 Beaulieu, Palace Road (Opposite Maharani's College of Science), Bangalore - 560 001.

Members of the Public and esteemed customers of Department of Posts in Bangalore Region may address their grievances if any, to the Assistant Director (Postal Operations), O/o Chief Postal General, Karnataka Circle, Bangalore – 560 001, so as to reach the Officer latest by 27th November 2018.

Grievances can also be sent by e-mail to tech.ka@indiapost.gov.in. It is requested that brief and specific details with relevant facts and figures may please be furnished along with complete contact details to facilitate speedy redressal.

**ಸಂಖ್ಯೆ 1322/1422**

## ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟ

ಬೆಂಗಳೂರು, ನವೆಂಬರ್ 19, (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ವಾಸ್ತುಶಿಲ್ಪ ಇಲಾಖೆಯಲ್ಲಿನ ಆಕೃತಿ ರಚನಕಾರರು 02+01 (ಹೈ.ಕ) ಹುದ್ದೆಗೆ ದಿನಾಂಕ: 16–11–2018 ರಂದು ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಆಯೋಗದ ಅಂತರ್ಜಾಲದಲ್ಲಿ "http://kpsc.kar.nic.in" ಪ್ರಕಟಿಸಲಾಗಿದೆ. ಆಕ್ಷೇಪಣೆಗಳಿದ್ದಲ್ಲಿ ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟಿಸಲಾದ ದಿನಾಂಕದಿಂದ 7 ದಿನಗಳೊಳಗಾಗಿ ಸಲ್ಲಿಸಬಹುದಾಗಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

**ಸಂಖ್ಯೆ 1323/1423**

## ಆಯ್ಕೆಪಟ್ಟಿ ಪ್ರಕಟ

ಬೆಂಗಳೂರು, ನವೆಂಬರ್ 19, (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು 2016 ನೇ ಸಾಲಿನ ರಾಜ್ಯ ಸಿವಿಲ್ ಸೇವೆಗಳಡಿ ವಿವಿಧ ಇಲಾಖೆಗಳಲ್ಲಿನ 341(ಉಳಿಕೆ ಮೂಲವೃಂದ 214+127 ಹೈ.ಕ.) ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಅಂತಿಮ ಆಯ್ಕೆಪಟ್ಟಿಯನ್ನು ಆಯೋಗದ ಅಂತರ್ಜಾಲದಲ್ಲಿ "http://kpsc.kar.nic.in" ಪ್ರಕಟಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

# "ವಿಶೇಷ ಮತದಾರ ನೋಂದಣಿ ಅಭಿಯಾನ"

ಬೆಂಗಳೂರು, ನವೆಂಬರ್ 19, (ಕರ್ನಾಟಕ ವಾರ್ತೆ)

ಭಾರತ ಚುನಾವಣಾ ಆಯೋಗದ ನಿರ್ದೇಶನಗಳನ್ವಯ ಮತದಾರರ ಪಟ್ಟಿಗಳ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ –2019 ಕಾರ್ಯಕ್ರಮ ಪ್ರಗತಿಯಲ್ಲಿರುತ್ತದೆ. ಈ ಸಂದರ್ಭದಲ್ಲಿ "ಯಾವುದೇ ಮತದಾರನು ಬಿಟ್ಟುಹೋಗಬಾರದು" ("No Voter left behind") ಎಂಬ ಧ್ಯೇಯವಾಕ್ಯದನ್ವಯ ಬಿಟ್ಟುಹೋದ ಹಾಗೂ ಯುವ ಮತದಾರರನ್ನು ಗಮನದಲ್ಲಿಟ್ಟುಕೊಂಡು ಮತದಾರ ನೋಂದಣಿ ಆಭಿಯಾನದಡಿ ದಿನಾಂಕ:23–11–2018, 24–11–2018 ಹಾಗೂ 25–11–2018 ರಂದು "ವಿಶೇಷ ಮತದಾರ ನೋಂದಣಿ ಅಭಿಯಾನ" (ಮಿಂಚಿನ ನೋಂದಣಿ) ಕಾರ್ಯಕ್ರಮವನ್ನು ಎಲ್ಲಾ ಮತಗಟ್ಟೆಗಳಲ್ಲಿ ಹಮ್ಮಿಕೊಳ್ಳಲಾಗುವುದು ಈ ಅವಕಾಶವನ್ನು ಸಾರ್ವಜನಿಕರು ಸದುಪಯೋಗ ಪಡಿಸಿಕೊಳ್ಳುವುದು.

ಎಲ್ಲಾ ಜಿಲ್ಲೆಗಳ ಜಿಲ್ಲಾ ಚುನಾವಣಾಧಿಕಾರಿಗಳು ದಿನಾಂಕ: 23.11.2018, 24.11.2018 ಹಾಗೂ 25.11.2018 ರಂದು ತಮ್ಮ ವ್ಯಾಪ್ತಿಯಲ್ಲಿರುವ ಎಲ್ಲಾ ಮತಗಟ್ಟೆಗಳಲ್ಲಿ "ವಿಶೇಷ ನೋಂದಣಿ" ಅಭಿಯಾನವನ್ನು ಹಮ್ಮಿಕೊಳ್ಳುತ್ತಾರೆ.

ಎಲ್ಲಾ ಮತಗಟ್ಟೆ ಮಟ್ಟದ ಅಧಿಕಾರಿಗಳು 2019ರ ಕರಡು ಭಾವಚಿತ್ರವಿರುವ ಮತದಾರರ ಪಟ್ಟಿಯನ್ನು ಸೇರ್ಪಡೆ ಹಾಗೂ ತೆಗೆದು ಹಾಕಲಾಗಿರುವ ಮತದಾರರ ವಿವರಗಳ ಪಟ್ಟಿಯೊಂದಿಗೆ ಆಯಾ ಮತಗಟ್ಟೆಗಳಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಹಾಗೂ ತಿಳುವಳಿಕೆಗಾಗಿ ಪ್ರಕಟಿಸಲಾಗಿದ್ದು, ತಮ್ಮ ಹೆಸರು ಹಾಗೂ ವಿವರಗಳನ್ನು ಪರಿಶೀಲಿಸಿ ಕೊಳ್ಳಬಹುದಾಗಿದೆ.

ಹೊಸ ಅರ್ಜಿಗಳ ನಮೂನೆ–6, 7, 8 ಮತ್ತು 8ಎ ಅರ್ಜಿಗಳ ನಮೂನೆಗಳನ್ನು ಬಿ.ಎಲ್.ಓ ಗಳಿಂದ ಪಡೆದು ಭರ್ತಿಮಾಡಿ ಸೂಕ್ತ ದಾಖಲೆಗಳೊಂದಿಗೆ ಸಲ್ಲಿಸಬಹುದಾಗಿದೆ. ಹೆಸರು, ವಯಸ್ಸು, ತಂದೆ ಹೆಸರು ಇತ್ಯಾದಿ ಗಳಿಗೆ ತಿದ್ದುಪಡಿ ಮಾಡುವ ಅವಕಾಶವಿರುತ್ತದೆ.

ಈ ವಿಶೇಷ ಅಭಿಯಾನದ ಬಗ್ಗೆ ಸಾರ್ವಜನಿಕರು ತಮ್ಮ ಸ್ನೇಹಿತರು, ನೆರೆಹೊರೆ ಹಾಗೂ ಇತರ ಜನರು ಭಾಗವಹಿಸುವಂತೆ ಪ್ರೇರೇಪಿಸುವುದು ಎಂದು ಪ್ರಕಟಣೆ ತಿಳಿಸಿದೆ.

ಸಂಖ್ಯೆ 1323/1423

**Patients seeking claim of compensation who has been implanted with ASR Hip Implants of Depuy International Ltd (Now Johnson and Johnson) before August, 2010 can approach the State Level Committee.**

The Government of India has constituted a Central Expert Committee and State Level Committees to address the claim for compensation who has been implanted with ASR Hip Implants of Depuy International Ltd (Now Johnson and Johnson) before August, 2010.

Therefore, the concerned patients are advised to approach the State Level Committee with detailed application form (check list available on www.cdsco.gov.in) to support their claim.

The contact details of the State Level Committee is as under:

Address:

Sri. AmareshTumbagi,

Drugs Controller (a/c) / Member Secretary of State Level Committee to address the claim for compensation who has been implanted with ASR Hip Implants of Depuy International Ltd (Now Johnson and Johnson) before August, 2010

Drugs Control Department, Palace Road, Bangalore-560001.

Mail Id: dckarnataka@gmail.com Phone number: 080-22264760/22268974/22262846 Mobile number: 9448585884